

ಕುಂದಗೋಳ ತಾಲೂಕು ಯರಗುಪ್ಪಿ ಗ್ರಾಮದಲ್ಲಿ ಮೊಹರಂ ಕೊನೆ ದಿನ ಬುಧವಾರ ದೇವರುಗಳು ಹೊಳೆಗೆ ಹೋಗುವ ಮೊದಲು ಗ್ರಾಮದ ಕಟ್ಟಿ ಬಯಲಿನಲ್ಲಿ ಸಮಾಗಮವಾಗಿರುವುದು.

# ಧಾರವಾಡದಲ್ಲಿ ನಾಳೆಯಿಂದ ನವೋದ್ಯಮಿ ಸಂತೆ

**ಧಾರವಾಡ** : ನಗರದ ನವೋದ್ಯಮಿ ಸಂಸ್ಥೆಯು ಸಣ್ಣ ಉದ್ಯಮಿದಾರರ ಅಭಿವೃದ್ಧಿಗಾಗಿ ಸೆ. 13ರಿಂದ 15ರ ವರೆಗೆ ನವೋದ್ಯಮಿ ಸಂತೆಯನ್ನು ಕೆಲಗೇರಿಯ ಬನಶಂಕರಿ ಕಲಾ ಮಂಟಪದಲ್ಲಿ ಆಯೋಜಿಸಲಾಗಿದೆ.

ಈ ಸಂತೆಯಲ್ಲಿ ಸಾವಯವ ಪದಾರ್ಥಗಳು, ವಿವಿಧ ಬಗೆಯ ತಿಂಡಿಗಳು, ಸಿರಿಧಾನ್ಯಗಳು, ಕೈಮಗ್ಗದ ಸೀರೆಗಳು, ಉಡುಪುಗಳು, ಕರಕುಶಲ ವಸ್ತುಗಳ ಪ್ರದರ್ಶನ ಮತ್ತು ಮಾರಾಟಕ್ಕೆ ಲಭ್ಯವಿರುತ್ತದೆ. ಮಧ್ಯಾಹ್ನ 12 ರಿಂದ ರಾತ್ರಿ 9ರ ವರೆಗೆ ಸಂತೆ ನಡೆಯಲಿದೆ. ಸ್ವ ಉದ್ಯಮ ಮಾಡುವವರು ಭಾಗವಹಿಸಬಹುದು. ಸಂತೆಯಲ್ಲಿ ಮಳಿಗೆ ಹಾಕಲು ಬಯಸುವವರು ಮಾಹಿತಿಗಾಗಿ ಮೊ.8618650819, 8951597238, 9482668701ಗೆ ಸಂಪರ್ಕಿಸಲು ಕಾರ್ಯಕ್ರಮ ಸಂಯೋಜಕ ನೀರಜಾ ಪಟವಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.